MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 18-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 1 ತಿಂಗಳು ಕನಿಷ್ಠ ಮಟ್ಟಕ್ಕೆ ಕುಸಿತ

ಕಚ್ಚಾ ತೈಲ ಬೆಲೆ ಇಳಿಕೆ, ಪ್ರತಿಸ್ಪರ್ಧಿ ಸೋಯಾಎಣ್ಣೆ ದರ ಇಳಿಕೆಯಿಂದ ಹಾಗೂ ಬೇಡಿಕೆಯ ಕಳವಳದಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಕುಸಿತ ಕಂಡಿದ್ದು ತಿಂಗಳ ಕನಿಷ್ಠ ಮಟ್ಟಕ್ಕಿಳಿದು ವಾರದ ಶೇಕಡಾ ದರ ಕುಸಿತದ ಸಮೀಪ ತಲುಪಿದೆ. ದರ 160 ರಿಂಗಿಟ್ಸ್ (3.8 ಶೇಕಡಾ) ಇಳಿಕೆಯಾಗಿ ಟನ್‌ಗೆ 3869 ರಿಂಗಿಟ್ಸ್ ( $ 848.89) ಗೆ ಇಳಿಕೆಯಾಗಿದೆ. ಸತತ ನಾಲ್ಕನೇ ಅವಧಿಯ ಕುಸಿತ ಹಾಗೂ 4 ತಿಂಗಳಿನ ತೀವ್ರ ಕುಸಿತಕ್ಕೊಳಗಾಗಿದೆಯೆನ್ನಲಾಗಿದೆ. ಚೀನಾದ ಕೋವಿಡ್ ನಿರ್ಬಂಧ ಹೆಚ್ಚಳದಿಂದ ಅಲ್ಲಿನ ಬೇಡಿಕೆ ಇಳಿಕೆ, ಉತ್ಪಾದನೆ ಹೆಚ್ಚಳ, ದಾಸ್ತಾನು ಹೆಚ್ಚಳ, ರಿಂಗಿಟ್ಸ್ ಪ್ರಬಲತೆ ಇವುಗಳು ದರ ಇಳಿಕೆಗೆ ಕಾರಣವೆನ್ನಲಾಗಿದೆ. ಸೋಯಾಬೀನ್ ಎಣ್ಣೆ ದರ ಚಿಕಾಗೋ ಮಾರುಕಟ್ಟೆಯ 2 ಶೇಕಡಾ ಇಳಿಕೆಯಾಗಿದೆ.

## ನವೆಂಬರ್ 15 ರ ತನಕ 19.9 ಲಕ್ಷ ಟನ್ ಸಕ್ಕರೆ ಉತ್ಪಾದನೆ

ಭಾರತದಲ್ಲಿ 2022-23 ನೇ ಸಾಲಿನ ಸಕ್ಕರೆ ಉತ್ಪಾದನೆ ನವೆಂಬರ್ 15 2022 ರ ತನಕ 19.9 ಲಕ್ಷ ಟನ್‌ಗಳಾಗಿವೆಯೆನ್ನಲಾಗಿದೆ. ಹಿಂದಿನ ವರ್ಷ ಈ ಅವಧಿಯಲ್ಲಿ 20.8 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿತ್ತು. ಇದುವರೆಗೆ ಭಾರತದ ಸಕ್ಕರೆ ಕಾರ್ಖಾನೆಗಳು 35 ಲಕ್ಷ ಸಕ್ಕರೆ ರಫ್ತು ಮಾಡಲು ಕರಾರು ಮಾಡಿಕೊಂಡಿವೆಯೆನ್ನಲಾಗಿದೆ.

## ನವೆಂಬರ್ 11 ರ ತನಕ ಸರಕಾರಿ ಭತ್ತ ಖರೀದಿ 231 ಲಕ್ಷ ಟನ್‌ಗಳು

ನವೆಂಬರ್ 11, 2022 ರ ತನಕ ಭಾರತದಲ್ಲಿ 231 ಲಕ್ಷ ಟನ್‌ಗಳು ಭತ್ತ ಸರಕಾರಿ ಏಜೆನ್ಸಿಗಳಿಂದ ಖರೀದಿಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 228 ಲಕ್ಷ ಟನ್ ಭತ್ತ ಖರೀದಿಯಾಗಿತ್ತೆನ್ನಲಾಗಿದೆ.